ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 295 ಎಸ್‌ಪಿಎಸ್(1) 2008

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ: 01-08-2013.

**ಸುತ್ತೋಲೆ**

ವಿಷಯ:- ಖರೀದಿ ಪ್ರಸ್ತಾವನೆಗಳನ್ನು ತಯಾರಿಸುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ- ಸೂಚನೆಗಳು

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ: ಡಿಟಿಇ 295 ಎಸ್‌ಪಿಎಸ್(1) 2008 ದಿನಾಂಕ:25-09-2008

****

ಉಲ್ಲೇಖದಲ್ಲಿ ನಮೂದಿಸಿರುವ ಸುತ್ತೋಲೆಯಲ್ಲಿ, ಯಂತ್ರೋಪಕರಣ, ಪೀಠೋಪಕರಣ ಮತ್ತು ಪುಸ್ತಕ ಇತರೆ ಸಾಮಗ್ರಿಗಳನ್ನು ಖರೀದಿಸಲು ಅನುಸರಿಸಬೇಕಾದ ಕ್ರಮಗಳನ್ನು ಪ್ರಚರಪಡಿಸಲಾಗಿದೆ. ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕೆಲವೊಂದು ಅಂಶಗಳನ್ನು ಪಾಲಿಸದೇ ಇರುವುದರಿಂದ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಲು ವಿಳಂಬವಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಆದ ಕಾರಣ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ತಪ್ಪದೇ ಪಾಲಿಸಬೇಕೆಂದು ಮತ್ತೊಮ್ಮೆ ತಿಳಿಸಲಾಗಿದೆ. ಮುಂದುವರಿದಂತೆ ಈ ಕೆಳಕಂಡ ಅಂಶಗಳನ್ನು ಗಮನಕ್ಕೆ ತರಲಾಗಿದೆ.

1) ಕನಿಷ್ಟ ದರವನ್ನು ನಮೂದಿಸಿರುವ ಯಂತ್ರೋಪಕರಣ, ಪೀಠೋಪಕರಣ ಮತ್ತು ಪುಸ್ತಕ ಇತರೆ ಸಾಮಗ್ರಿಗಳ ದರಗಳು ಮಾರುಕಟ್ಟೆ ದರಗಳಿಗಿಂತ ಹೆಚ್ಚಿಗೆ ಇಲ್ಲದೇ ಇರುವ ಬಗ್ಗೆ, ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಎಲ್ಲಾ ವಿಭಾಗಗಳ ವಿಭಾಗಾಧಿಕಾರಿಗಳು(ವಿಭಾಗಾಧಿಕಾರಿಗಳು ಇಲ್ಲದೇ ಇದ್ದ ಪಕ್ಷದಲ್ಲಿ ಸಂಬಂಧಿಸಿದ ವಿಭಾಗಗಳ ಹಿರಿಯ ಉಪನ್ಯಾಸಕರು) ಹಾಗು ಖರೀದಿಸಲು ಶಿಫಾರಸ್ಸುಮಾಡಲಾದ ವಿಭಾಗದ ಇಬ್ಬರು ಉಪನ್ಯಾಸಕರನ್ನೊಳಗೊಂಡ ಸಮಿತಿಯಲ್ಲಿ ದೃಢೀಕರಣವನ್ನು ತಪ್ಪದೇ ಮಾಡತಕ್ಕದ್ದು.
2) ಅಲ್ಲದೆ ಯಂತ್ರೋಪಕರಣ, ಪೀಠೋಪಕರಣ ಮತ್ತು ಪುಸ್ತಕ ಇತರೆ ಸಾಮಗ್ರಿಗಳನ್ನು ಸ್ವೀಕರಿಸುವ ಮುನ್ನ ಗುಣಮಟ್ಟದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ದೃಢೀಕರಿಸತಕ್ಕದ್ದು.
3) ಅನ್ವಯವಾಗುವ ಎಲ್ಲಾ ಸಂದರ್ಭಗಳಲ್ಲಿಯೂ ಕೆ.ಟಿ.ಪಿ.ಪಿ.ನಿಯಮಗಳನ್ನು ಪಾಲಿಸತಕ್ಕದ್ದು ಮತ್ತು ಯಾವುದೇ ಸಂಧರ್ಭದಲ್ಲಿಯೂ ಕೆ.ಟಿ.ಪಿ.ಪಿ. ನಿಯಮಗಳನ್ನು ಉಲ್ಲಂಘಿಸುವ ಉದ್ದೇಶದಿಂದ ಪ್ರಸ್ತಾವನೆಗಳನ್ನು ವಿಭಜಿಸಬಾರದೆಂದು ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ

1) ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಕಿರಿಯತಾಂತ್ರಿಕ ಶಿಕ್ಷಣ ಶಾಲೆಗಳ ಪ್ರಿನ್ಸಿಪಾಲರುಗಳಿಗೆ
2) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರುಗಳಿಗೆ
3) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಲೆಕ್ಕಾಧಿಕಾರಿಗಳಿಗೆ
4) ಉಗ್ರಾಣ/ನಗದು/ಬಿಎಲ್‌ಎಸ್ ವಿಭಾಗಗಳಿಗೆ
5) ಇ-ಆಡಳಿತ ವಿಭಾಗಕ್ಕೆ – ಸುತ್ತೋಲೆಯನ್ನು ಇಲಾಖೆಯ ಜಾಲ ತಾಣದಲ್ಲಿ ಪ್ರಚುರಪಡಿಸುವುದು.